ಇಂಥ ಅನೇಕರು ಸೇರಿಕೊಂಡು 'ನೆನಪಿನ ಉಗ್ರಾಣ' ಸಮೃದ್ಧವಾಗಿದೆ.

ವೈದ್ಯೆ ಆಗಬೇಕು ಎನ್ನುವ ಆಸೆ ಲಲಿತಮ್ಮನವರಿಗಿತ್ತು. ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳು ಹೆರಿಗೆ ಸಂದರ್ಭದಲ್ಲಿ ಸಾಯುವುದನ್ನು ನೋಡಿ, ಪ್ರಸೂತಿತಜ್ಞೆ ಆಗುವ ಕನಸು ಕಂಡಿದ್ದರು. ಆದರೆ, ಸಾಂಪ್ರದಾಯಿಕ ಕುಟುಂಬ ಅವರ 'ವೈದ್ಯೆಯಾಗಬೇಕು' ಎನ್ನುವ ಆಸೆಗೆ ಅವಕಾಶ ಕಲ್ಪಿಸಲಿಲ್ಲ. ಮೊಮ್ಮಗಳನ್ನು ಹೆಣ ಕುಯ್ಯುವ ಕೆಲಸಕ್ಕೆ ಓದಿಸಕೂಡದು ಎನ್ನುವ ಹಟ ಅಜ್ಜಿಯದು. ಹಾಗಾಗಿ, ಸ್ವತಃ ವೈದ್ಯೆಯಾಗದೆ ಹೋದರೂ, ಲಲಿತಮ್ಮನವರು ಪತಿಯ ಮೂಲಕ ತಮ್ಮ ಕನಸನ್ನು ಈಡೇರಿಸಿಕೊಂಡರು. ಅವರ ಪತಿ ಚಂದ್ರಶೇಖರ್ ಜನಪರ ವೈದ್ಯರು. 'ಗುಳಿಗೆ ಡಾಕ್ಟ್ರು' ಎಂದೇ ಜನಪ್ರಿಯರು. 'ಪತಿ ಡಾಕ್ಟರ್' ಎನ್ನುವುದು ಲಲಿತಮ್ಮನವರಿಗೆ ಎಷ್ಟು ಅಭಿಮಾನದ ಸಂಗತಿ ಎಂದರೆ, ಅವರು ತಮ್ಮ ಪತಿಯ ಬಗ್ಗೆ ಪ್ರಸ್ತಾಪಿಸುವಾಗಲೆಲ್ಲ 'ನನ್ನ ಡಾಕ್ಟರ್ ಚಂದ್ರಶೇಖರ್' ಅಂತಲೇ ಒಂದು ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ಬರೆಯುತ್ತಾರೆ.

ಸ್ವತಃ ವೈದ್ಯರಾಗದೆ ಹೋದರೂ, ಲಲಿತಮ್ಮನವರು ತಮ್ಮ ಜೀವನದುದ್ದಕ್ಕೂ ವೈದ್ಯರ ಪಾತ್ರವನ್ನೇ ನಿರ್ವಹಿಸಿದರು ಎನ್ನುವುದಕ್ಕೆ ಈ ಪುಸ್ತಕದಲ್ಲಿ ಅನೇಕ ಪುರಾವೆಗಳಿವೆ. ಹಾಗೆ ನೋಡಿದರೆ ಎಲ್ಲ ಮಹಿಳೆಯರೂ ತಂತಮ್ಮ ಮನೆಗಳ ಸ್ವಾಸ್ಥ್ಯ ಕಾಪಾಡುವ ಕುಟುಂಬ ವೈದ್ಯರೇ. ಲಲಿತಮ್ಮನಂಥವರು ಕುಟುಂಬದ ವ್ಯಾಪ್ತಿ ಮೀರಿ ಸಮಾಜಕ್ಕೆ ವೈದ್ಯರಾಗಿ ಪರಿಣಮಿಸುತ್ತಾರೆ. ಡಾ. ಚಂದ್ರಶೇಖರ್ ಅವರು ಜನರ ದೈಹಿಕ ಸಂಕಟಗಳಿಗೆ ಚಿಕಿತ್ಸೆ ನೀಡಿದರೆ, ವೈದ್ಯ ಪದವಿಯಿಲ್ಲದ ಲಲಿತಮ್ಮನವರು ತಮ್ಮ ಸಂಪರ್ಕಕ್ಕೆ ಬಂದ ಜನರ ಸಂಕಟಗಳನ್ನು ಶಮನಗೊಳಿಸುವ ಸಾಮಾಜಿಕ ವೈದ್ಯೆಯ ರೂಪದಲ್ಲಿ ಕಾಣಿಸುತ್ತಾರೆ.

ಅವೇಳೆಯಲ್ಲಿ, ಅರ್ಧ ರಾತ್ರಿಯಲ್ಲಿ ಡಾಕ್ಟರ್ ಮನೆಯ ಬಾಗಿಲನ್ನು ಜನ ತಟ್ಟೋದು ಸಹಜ. ಆದರೆ, ಇಲ್ಲಿ ಅರ್ಧ ರಾತ್ರಿಯಲ್ಲಿ ಬಂದು ಬಾಗಿಲು ತಟ್ಟುವ ಬಹುತೇಕರು ನೋಡಲಿಕ್ಕೆ ಬರುವುದು ಡಾಕ್ಟರ್ ಚಂದ್ರಶೇಖರ್ ಅವರನ್ನಲ್ಲ, ಲಲಿತಮ್ಮನವರನ್ನು. 'ಸಾಯಲು ಹೊರಟವಳು' ಒಂದು ಬರಹದಲ್ಲಿ, ಮೂವತ್ತರ ಸುಮಾರಿನ ಒಬ್ಬ ಹೆಂಗಸು ಅರ್ಧ ರಾತ್ರಿಯಲ್ಲಿ ಬಾಗಿಲು ತಟ್ಟಿ, ಲಲಿತಮ್ಮನವರಿಗೆ ತನ್ನ ಕುಡುಕ ಗಂಡನ ಹಿಂಸೆಯ ಬಗ್ಗೆ ಹೇಳಿಕೊಳ್ಳುತ್ತಾಳೆ. ತನ್ನ ಸಂಕಟಗಳನ್ನು ಹೇಳ್ಬಿಟ್ಟು ತುಂಗಭದ್ರೆಗೆ ಬಿದ್ದು ಸಾಯುವುದು ಅವಳ ಉದ್ದೇಶ. ನೊಂದ ಹೆಣ್ಣಿಗೆ ಸಮಾಧಾನ ಹೇಳಿ, ಆ ರಾತ್ರಿ ಆಶ್ರಯ ಕೊಡುತ್ತಾರೆ. ಬೆಳಗ್ಗೆ, ಹೆಂಡತಿಯನ್ನು ಕಾಡುತ್ತಿದ್ದ ಗಂಡಿಗೆ ಬುದ್ಧಿ ಹೇಳಿ, ಕುಡಿಯುವುದಿಲ್ಲವೆಂದು ಪ್ರಮಾಣ ಮಾಡಿಸಿಕೊಳ್ಳುತ್ತಾರೆ. 'ಯಾರನ್ನು ಕೇಳಿ ಪ್ರೀತಿಸಿದೆ?' ಬರಹದಲ್ಲಿ ಯುವತಿಯೊಬ್ಬಳು ಅರ್ಧ ರಾತ್ರಿಯಲ್ಲಿ ಬಾಗಿಲು ತಟ್ಟುತ್ತಾಳೆ. ಅವಳ ಪ್ರೇಮ ಪ್ರಕರಣ ತಿಳಿದು ಅಪ್ಪ–ಅಮ್ಮ ಮನೆಯಿಂದ ಹೊರಹಾಕಿದ್ದಾರೆ. ಮದುವೆ ಆಗಬೇಕಿದ್ದ ಹುಡುಗ ಅಪ್ಪ–ಅಮ್ಮನ ವರದಕ್ಷಿಣೆ ಬೇಡಿಕೆ ಮುಂದಿಟ್ಟಿದ್ದಾನೆ. ಕಂಗಲಾದ ಯುವತಿಗೆ ಧೈರ್ಯ ಹೇಳುವ ಲಲಿತಮ್ಮನವರು, ಹುಡುಗನ ಕಡೆಯವರನ್ನು ಸಂಪರ್ಕಿಸಿ, ಕಾನೂನಿನ ಬೆದರಿಕೆ ಒಡ್ಡಿ, ಮದುವೆ ಮಾಡಿಸುತ್ತಾರೆ.

'ಟೈಫಾಯಿಡ್ ಜ್ವರ ಬಿಡದ ಹುಡುಗಿಯ ಕಥೆ', ಡಾಕ್ಟರ್ ಚಂದ್ರಶೇಖರ್ ಅವರಿಂದ ಗುಣಪಡಿಸಲಾಗದ ಕಾಯಿಲೆಯನ್ನು ಶ್ರೀಮತಿ ಚಂದ್ರಶೇಖರ್ ಅವರು ಪರಿಹರಿಸಿದ ಕಥನ. ಕೇರಿಯಲ್ಲಿನ ಒಬ್ಬಳು ಹುಡುಗಿಗೆ ಟೈಫಾಯಿಡ್. ಗರ್ಭಿಣಿ ಬೇರೆ. ಇಪ್ಪತ್ತು ದಿನಗಳಿಂದ ಜ್ವರ. ಗಂಡನಿಂದ ವಿಷಯ ತಿಳಿದ ಲಲಿತಮ್ಮ ಆ ಹುಡುಗಿಯ ಮನೆಗೆ ಹೋಗಿ ವಿಚಾರಿಸಿದರೆ ಅಲ್ಲಿ ಕ್ರೌರ್ಯದ ಕಥನ ಎದುರಾಗುತ್ತದೆ. ವರದಕ್ಷಿಣೆ ಕೊಡಲಿಲ್ಲವೆಂದು ಸಿಟ್ಟಾದ ಗಂಡು, ಗರ್ಭಿಣಿ ಪತ್ನಿಯ ಮೇಲೆ ದೈಹಿಕ ದೌರ್ಜನ್ಯ ನಡೆಸಿದ್ದಾನೆ. ಅವನಿಗೆ ಬುದ್ಧಿ ಹೇಳಿ, ಆ ಹುಡುಗಿಯನ್ನು ಹೆರಿಗೆಗಾಗಿ ತವರಿಗೆ ಕಳಿಸುವ ಲಲಿತಮ್ಮನವರು ಉದ್ಗರಿಸುವ ಒಂದು ಮಾತು: 'ಹೇಳುವವರೇ ಇಲ್ಲದ ಹಾಳಾಗುವ ಸಂಸಾರಗಳು ಎಷ್ಟೋ. ಹೇಳಿದರೂ ಕೇಳದೆ ಉಡಾಫೆಯಿಂದ ಹಾಳಾಗುವ ಸಂಸಾರಗಳು ಎಷ್ಟೋ.'

'ಆ ಹುಡುಗಿ' – ವೇಶ್ಯಾವೃತ್ತಿಯಲ್ಲಿ ತೊಡಗಿದ್ದ ಯುವತಿಯೊಬ್ಬಳ ಪ್ರಸಂಗ. ಚಿಕಿತ್ಸೆಗಾಗಿ ಡಾಕ್ಟರ್ ಬಳಿಗೆ ಬರುವ ಆ ಹುಡುಗಿಯ ಬದುಕಿನ ದುರಂತಕ್ಕೆ ಲಲಿತಮ್ಮನವರು ಮರುಗುತ್ತಾರೆ. ಮತ್ತೊಂದು ಊರಿನಲ್ಲಿ ಗೆಳತಿ ನಡೆಸುವ ಶಾಲೆಯಲ್ಲಿ ಆ ಯುವತಿಯ ತಾಯಿಗೆ ಕೆಲಸ ಕೊಡಿಸಿ, ಅವರು ಬದುಕು